

## ಗರಿಡಗಣ್ಣಿನ ಜೈಲ ವಿನ್ಯಾಸ

ಅಂಡಮಾನಿನ 'ಸೆಲ್ಯುಲಾರ್ ಸೆರೆಮನೆ' ಇತಿಹಾಸ ಪುಟಗಳಲ್ಲಿ ದಾಖಲಾಗಿರುವ ಭಾರತದಲ್ಲಿನ ವಸಾಹತು ಶಾಹಿ ಆಡಳಿತದ ಕುರುಹು. ಸೆಲ್ಯುಲಾರ್ ಜೈಲಿನ ವಿನ್ಯಾಸವು ವಿಕಿರಣಗೊಳಿಸುವ ಏಳು ರೆಕ್ಕೆಗಳನ್ನೊಳಗೊಂಡಿರುವ ಬೃಹತ್ ಮೂರು ಅಂತಸ್ತಿನ ರಚನೆಯಾಗಿದ್ದು, ಕೇಂದ್ರ ಗಡಿಯಾರ ಗೋಪುರದಿಂದ ಹೊರಹೊಮ್ಮುತ್ತದೆ.

ಇದು ಚಕ್ರದ ಕಡ್ಡಿಗಳ ಆಕಾರದಲ್ಲಿರುವ ಈ ಜೈಲಿನಲ್ಲಿರುವ ಪ್ರತಿಯೊಂದು ವಿಭಾಗವು ಮೂರು ಮಹಡಿಗಳನ್ನು ಒಳಗೊಂಡಿದೆ. ಅದರಲ್ಲಿ ಒಟ್ಟು 698 ಕೋಶಗಳನ್ನು ಹೊಂದಿರುತ್ತದೆ. ಸೆಲ್ಯುಲಾರ್ ಜೈಲಿನ ವಾಸ್ತುಶಿಲ್ಪವನ್ನು 'ಪೆನ್ಸಿಲ್ವೇನಿಯಾ ಸಿಸ್ಟಮ್' ಅಥವಾ 'ಪ್ರತ್ಯೇಕ ವ್ಯವಸ್ಥೆ' ಸಿದ್ಧಾಂತದ ಆಧಾರದ ಮೇಲೆ ಕಲ್ಪಿಸಲಾಗಿದೆ. ಇದರಲ್ಲಿ ಪ್ರತಿ ಕೈದಿಗಳಿಗೆ ಇತರ ಕೈದಿಗಳಿಂದ ಸಂಪೂರ್ಣ ಪ್ರತ್ಯೇಕತೆಗಾಗಿ ಪ್ರತ್ಯೇಕ ಬಂಧನ ಅಗತ್ಯ ನಿಯಮದ ವ್ಯವಸ್ಥೆ ಮಾಡಲಾಗಿದೆ. ಒಂದೇ ಅಥವಾ ವಿಭಿನ್ನ ರೆಕ್ಕೆಗಳಲ್ಲಿರುವ ಕೈದಿಗಳ ನಡುವೆ ಯಾವುದೇ ರೀತಿಯ ಸಂವಹನ ಸಾಧ್ಯವಾಗದಂತೆ ನಿರ್ಮಿಸಲಾಗಿದೆ. ಇದು ಕೇಂದ್ರ ಗೋಪುರದಿಂದ ಎಲ್ಲ ಕೈದಿಗಳ ಮೇಲೆ ಒಬ್ಬನೇ ಕಾವಲುಗಾರ ನಿಗಾವಹಿಸುವಂತೆ ನಿರ್ಮಿಸಲಾಗಿದೆ.

—ಎಸ್. ಪ್ರಭಾವತಿ, ಬೆಂಗಳೂರು



## ಅಂದದ ಬಾಲದಂಡೆ ಹಕ್ಕಿ!

ಕಳೆದ ಮುಂಗಾರಿನಲ್ಲಿ ದಂಪತಿ ಪಕ್ಷಿಗಳು ಚಿಟ್ಟೆ, ಹುಳುಗಳು, ಡ್ರ್ಯಾಗನ್ ಫ್ಲೈಗಳನ್ನು ಬೇಟೆಯಾಡಿ ತಂದು ಮರಿಗಳಿಗೆ ಗುಟುಕು ಕೊಡುತ್ತಿದ್ದುದು ಕಣ್ಣಿಗೆ ಬಿತ್ತು. ಪಕ್ಷಿಗಳಿಗೆ ತೊಂದರೆಯಾಗದಂತೆ ಜೊತೆಗಿದ್ದ ಆಕಾಶ ಫೋಟೊ ಕ್ಲಿಕ್ಕಿಸಿದ.

ಇದು ಮೊನಾರ್ಕಿಡೇ ಕುಟುಂಬಕ್ಕೆ ಸೇರಿದ ಪಕ್ಷಿ. ವೈಜ್ಞಾನಿಕವಾಗಿ ಟೆರ್ಪ್ಸಿಫೋನ್ ಪ್ಯಾರಡೈಸಿ ಎನ್ನುವರು. ಈಗ ಇಂಡಿಯನ್ ಪ್ಯಾರಡೈಸ್ ಫ್ಲೈಕ್ಯಾಚರನ್ನೇ ಟೆರ್ಪ್ಸಿಫೋನ್ ಪ್ಯಾರಡೈಸ್ ಫ್ಲೈಕ್ಯಾಚರ್ ಹಕ್ಕಿಯೆಂದು ಕರೆಯಲಾಗುತ್ತದೆ. ಇದರ ಮೋಹಕ ಬಣ್ಣದಿಂದ ರಾಜಹಕ್ಕಿ ಎಂದೂ, ಉದ್ದವಾದ ಬಾಲವಿರುವುದರಿಂದ ಬಾಲದಂಡೆ ಹಕ್ಕಿಯೆಂದೂ ಕರೆಯುತ್ತಾರೆ. ಪಿಕಳಾರದ ಗಾತ್ರವನ್ನು ಹೋಲುವ ಇದಕ್ಕೆ ಉದ್ದ ಬಾಲ, ತಲೆಯ ಮೇಲೆ ಕಪ್ಪು ಕಿರೀಟ ಹಾಗೂ ಜುಟ್ಟು ಇದೆ. ಕೆಂಗಂದು ರೆಕ್ಕೆಗಳಿವೆ. ಆಕಾರದಲ್ಲಿ ಗಂಡು ಹಕ್ಕಿಯ ಲಕ್ಷಣವಿದ್ದರೂ, ಹೆಣ್ಣಿಗೆ ಅಷ್ಟುದ್ದದ ಬಾಲವಿರುವುದಿಲ್ಲ.

—ಪ್ರಕಾಶ ಎಸ್.ಮನ್ನಂಗಿ, ಮೋಟೆಬೆನ್ನೂರು

## ಮರಳು ಚೆಲುವೆ



ನಮ್ಮನ್ನು ಬೆರಗುಗೊಳಿಸುವಂತಹ ಕೆಲವು ವೈಶಿಷ್ಟ್ಯಗಳು ಪ್ರಕೃತಿಯಲ್ಲಿರುತ್ತವೆ. ಅಂತಹ ವೈಶಿಷ್ಟ್ಯಗಳು ನಮ್ಮ ಕಣ್ಣುಮುಂದೆ ಇದ್ದರೂ ಕೆಲವೊಮ್ಮೆ ನಾವು ಗಮನಿಸಿರುವುದಿಲ್ಲ. ರೈಲಿನಲ್ಲಿ ಬೆಂಗಳೂರಿನಿಂದ ಮಂಗಳೂರಿಗೆ ಪ್ರಯಾಣಿಸುವಾಗ ಕಿಟಕಿ ಬದಿಯ ಸೀಟನ್ನೇ ಕಾಯ್ದಿರಿಸುತ್ತೇನೆ. ಬೆಳಿಗ್ಗೆ ಕಾಣಸಿಗುವ ಪ್ರಕೃತಿಯ ದೃಶ್ಯಗಳನ್ನು ಸೆರೆ ಹಿಡಿಯುತ್ತೇನೆ. ನಾನು ಇತ್ತೀಚೆಗೆ ಬೆಂಗಳೂರಿನಿಂದ ಮಂಗಳೂರಿಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದೆ. ಬಂಟವಾಳ ಸೇತುವೆ ಮೇಲೆ ರೈಲು ಚಲಿಸುತ್ತಿರುವಾಗ ಎಂದಿನಂತೆ ಅಂದೂ ಸಹ ನೇತ್ರಾವತಿ ನದಿಯ ಸೊಬಗನ್ನು ನನ್ನ ಮೊಬೈಲ್ ಕ್ಯಾಮರಾದಲ್ಲಿ ಸೆರೆ ಹಿಡಿದೆ. ನಾನು ಸೆರೆ ಹಿಡಿದ ಚಿತ್ರಗಳನ್ನು ಎರಡು ಮೂರು ದಿನಗಳ ನಂತರ ಕಂಪ್ಯೂಟರ್ ನಲ್ಲಿ ಹಾಕಿ ನೋಡುತ್ತಿರುವಾಗ ಅಚ್ಚರಿಗೊಳ್ಳುವ ಸರದಿ ನನ್ನದಾಗಿತ್ತು. ನೇತ್ರಾವತಿ ನದಿಯಲ್ಲಿ ಏರ್ಪಟ್ಟಿರುವ ಮರಳು ದಿಬ್ಬ ಹೆಣ್ಣಿನ ಮುಖವನ್ನು ಹೋಲುತ್ತಿತ್ತು. ಕೂಲಂಕಶವಾಗಿ ನೋಡಿದರೆ ಹೆಣ್ಣಿನ ಹಣೆ,ಮೂಗು,ಗಲ್ಲ, ಕೂದಲು ಇವೆಲ್ಲವೂ ಗೋಚರಿಸುತ್ತವೆ.ನದಿಯ ಮರಳಿನಿಂದಲೇ ಜನ್ಮತಾಳಿರುವ 'ಮರಳು ಚೆಲುವೆ 'ಯನ್ನು ಬಹಳಷ್ಟು ಪ್ರಯಾಣಿಕರ ಗಮನಿಸದಿರಲೂ ಬಹುದು. ಇದಕ್ಕೇ ಅಲ್ಲವೇ ಪ್ರಕೃತಿ ವೈಶಿಷ್ಟ್ಯಗಳ ಆಗರ ಎನ್ನುವುದು.

—ಜಿ. ನಾಗೇಂದ್ರ, ಸಂಡೂರು